15

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ ದಿನಾಂಕ : DATE : 10/3/2021

### ಶಾಸಕರಿಲ್ಲದಿರುವಾಗ ಹಕ್ಕು ಚ್ಯುತಿ ಮಂಡನೆಗೆ ಅವಕಾಶ ಸರಿಯಲ್ಲ: ಸಿದ್ದು | ಯಾರ ವಿರುದ್ಧ ಹಕ್ಕುಚ್ಯುತಿ ಮಾಡುತ್ತಾರೊ, ಅವರು ಇರಬೇಕು ಎಂದೇನೂ ಇಲ್ಲ: ಸಭಾಧ್ಯಕ್ಷರು

# ಸಂಗಮೇಶ್ವರ ವಿರುದ್ಧ ಹಕ್ಕುಚ್ಯುತಿ

ವಿ 10/3/21



**ವಿಧಾನಸಭೆ:** ಮಾಜಿ ಸಚಿವ ಜಾರಕಿಹೊಳಿ ವಿರುದ್ಧದ ಸಿ.ಡಿ ವಿವಾದ ಹಿನ್ನೆಲೆ ವಿಧಾನಸಭೆಯಲ್ಲಿ ಸಿ.ಡಿ ಸಿ.ಡಿ. ಸಿ.ಡಿ ಎಂದು ಘೋಷಣೆ ಕೂಗಿ ಕಾಂಗ್ರೆಸ್ ಸದಸ್ಯರು ಪ್ರತಿಭಟನೆ ನಡೆಸಿದರು.

ಇತ್ತೀಚೆಗೆ ಸದನದಲ್ಲಿ ಭದ್ರಾವತಿ ಶಾಸಕ ಸಂಗಮೇಶ್ ಶರ್ಟ್ ಬಿಚ್ಚಿ ಅಸಭ್ಯವಾಗಿ ವರ್ತಿಸಿದ್ದರು. ಈ ಪ್ರಕರಣದ ಹಿನ್ನೆಲೆಯಲ್ಲಿ ಸಂಗಮೇಶ್ವರ ವಿರುದ್ಧ ಬಿಜೆಪಿ ಶಾಸಕ ಆರಗ ಜ್ಞಾನೇಂದ್ರ ಹಕ್ಕು ಚ್ಯುತಿ ಪ್ರಸ್ತಾಪ ಮಾಡಿದರು. ಈ ವೇಳೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ಅವರು ಈ ಸದನದಲ್ಲಿ ಈಗ ಇಲ್ಲ, ಡಿಫೆಂಡ್ ಮಾಡಿಕೊಳ್ಳಲು ಶಾಸಕರಿಲ್ಲದಿರುವಾಗ ಅವರ ಬಗ್ಗೆ ಹಕ್ಕು ಚ್ಯುತಿ ನಿರ್ಣಯ ಮಂಡನೆಗೆ ಅವಕಾಶ ನೀಡುವುದು ಸರಿಯಲ್ಲ ಎಂದರು. ಈ ವೇಳೆ ಸದನದಲ್ಲಿ ಭಾರಿ ಗದ್ದಲ ಉಂಟಾಯಿತು.

**ಶಾಸಕಾಂಗದ ಮೌಲ್ಯ ಕುಸಿಯುತ್ತದೆ:** ಆಗ ಮಧ್ಯೆಪ್ರವೇಶ ಮಾಡಿದ ಸಭ್ಯಾಧ್ಯಕ್ಷರು, ನಿಯಮಗಳ ಪ್ರಕಾರ ಯಾರ ವಿರುದ್ಧ ಹಕ್ಕು ಚ್ಯುತಿ ಮಾಡುತ್ತಾರೊ, ಅವರು ಸದನದಲ್ಲಿ ಇರಬೇಕು ಎಂದೇನೂ ಇಲ್ಲ ಎಂದು ತಿಳಿಸಿದರು. ಇದರಿಂದ ಕೆರಳಿದ ಕಾಂಗ್ರೆಸ್ ಶಾಸಕರು, ಸದನದ ಬಾವಿಗಿಳಿದು ಪ್ರತಿಭಟನೆ ನಡೆಸಿದರು. ಪ್ರತಿಭಟನೆಯ ನಡುವೆಯೇ ಸಂಗಮೇಶ್ವರ ವಿರುದ್ಧ ಹಕ್ಕು ಚ್ಯುತಿ ಪ್ರಸ್ತಾವಕ್ಕೆ ಸ್ಪೀಕರ್ ಅನುಮತಿ ನೀಡಿದರು. ನಂತರ ಶಾಸಕ ಆರಗ ಜ್ಞಾನೇಂದ್ರ, ಈ ರೀತಿ ಶಾಸಕರು ವರ್ತನೆ ಮಾಡಿದರೆ ಶಾಸಕಾಂಗದ ಮೌಲ್ಯ ಕುಸಿಯುತ್ತದೆ. ಅಂತಹ ಘಟನೆ ನಡೆದ ನಂತರವೂ ಅವರ ದುರ್ವರ್ತನೆ ಹಾಗೂ ಸದನಕ್ಕೆ ಮಾಡಿದ ಅಪಮಾನದ ಹಿನ್ನೆಲೆಯಲ್ಲಿ ಹಕ್ಕುಚ್ಯುತಿ ಪ್ರಸ್ತಾವ ಮಂಡಿಸುತ್ತಿದ್ದೇನೆ ಎಂದರು.

ಸಂಗಮೇಶ್ವರ ಅವರನ್ನು ಅನಿರ್ದಿಷ್ಟಾವಧಿಗೆ ಈ ಸದನದಿಂದ ಹೊರಹಾಕಬೇಕು ಎಂದು ಒತ್ತಾಯಿಸಿ ಹಕ್ಕುಚ್ಯುತಿ ಮಂಡಿಸಿದರು. ಈ ಹಕ್ಕು ಚ್ಯುತಿ ಪ್ರಸ್ತಾವಕ್ಕೆ ಸಹಮತ ಸೂಚಿಸಲು ಬಿಜೆಪಿಯ 10ಕ್ಕೂ ಹೆಚ್ಚು ಶಾಸಕರು ಎದ್ದು ನಿಂತರು.

ಈ ನಡುವೆ ಮಧ್ಯಪ್ರವೇಶ ಮಾಡಿದ ಶಾಸಕ ಸುನೀಲ್ ಕುಮಾರ್ ಕಾರ್ಕಳ, ಸ್ಪೀಕರ್‌ಗೆ ಅಗೌರವಾಗಿ ಮಾತನಾಡಿದ್ದಾರೆ. ಸ್ಪೀಕರ್ ಬಗ್ಗೆ ಇಷ್ಟು ಕೆಟ್ಟದಾಗಿ ಮಾತಾಡಿದ ನಂತರವೂ ಅವರನ್ನು ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ. ಇದೆಂತಾ ರಾಜಕಾರಣ ಎಂದು ಪ್ರಶ್ನಿಸಿದರು.

**ಪ್ರತಿಭಟಿಸಲು ಅವಕಾಶವಿಲ್ಲ:** ಸಚಿವ ಬಸವರಾಜ ಬೊಮ್ಮಾಯಿ ಮಾತನಾಡಿ, ಸ್ಪೀಕರ್ ಪೀಠದ ಮುಂದೆಯೇ ಕೆಟ್ಟದಾಗಿ ಮಾತನಾಡಿದ್ದಾರೆ ಎಂದರು. ಸಿದ್ದರಾಮಯ್ಯ ಮಾತನಾಡಿ, ಶಾಸಕರು ಪ್ರತಿಭಟನೆ ಮಾಡಬಾರದೇ? ಶಾಸಕರಿಗೆ ಪ್ರತಿಭಟನೆ ಮಾಡಲು ಹಕ್ಕಿಲ್ಲವೇ ಎಂದು ಪ್ರಶ್ನೆ ಮಾಡಿದರು. ಇದಕ್ಕೆ ಸಭಾಧ್ಯಕ್ಷರು ಆಕ್ಷೇಪ ವ್ಯಕ್ತಪಡಿಸಿ, ಮನಸ್ಸಿಗೆ ಬಂದಂತೆ ಪ್ರತಿಭಟಿಸಲು ಇಲ್ಲಿ ಅವಕಾಶ ಇಲ್ಲ ಎಂದರು.

ಈ ವೇಳೆ ಸಚಿವ ಅಶೋಕ್ ಎದ್ದು ನಿಂತು, ಹಕ್ಕು ಚ್ಯುತಿ ಪ್ರಸ್ತಾವದ ಚರ್ಚೆ ಮುಂದುವರಿಯಲಿ ಎಂದು ಹೇಳಿದರು. ಸಭಾಧ್ಯಕ್ಷರ ಸ್ಥಾನ ಅತ್ಯಂತ ಗೌರವದ ಸ್ಥಾನವಾಗಿದೆ. ಆ ಸ್ಥಾನಕ್ಕೆ ನಾಳೆ ಮತ್ತೊಬ್ಬರು ಬರಬಹುದು. ಆದರೆ, ಆ ಸ್ಥಾನಕ್ಕೆ ಅಗೌರವ ತೋರಬಾರದು. ಹೀಗಾಗಿ ಚರ್ಚೆ ನಡೆಸಬೇಕು ಎಂದು ಅಶೋಕ್ ಹೇಳುತ್ತಿದಂತೆ ಕಾಂಗ್ರೆಸ್ ಶಾಸಕರು ಸಿಡಿ, ಸಿಡಿ, ಸಿಡಿ ಎಂದು ಘೋಷಣೆ ಕೂಗಲಾರಂಭಿಸಿದರು.